# KANNADA

***(Maximum Marks: 80)***

***(Time allowed: Three hours)***

(Candidates are allowed ***additional 15 minutes*** for only reading the paper.

They must NOT start writing during this time.)

---

Answer questions 1,2 , and 3 in ***Section A*** and ***four*** other questions from Section B on ***at least three*** of the prescribed textbooks.

The intended marks for questions or parts of questions are given in brackets [ ].

---

## SECTION A

## LANGUAGE – 40 Marks

**Question 1**

Write a composition in approximately 400 words in Kannada on any one of the topics given below: **[15]**

ಕೆಳಗೆ ಕೊಟ್ಟಿರುವ ವಿಷಯಗಳಲ್ಲಿ 'ಒಂದನ್ನು' ಆರಿಸಿ 400 ಪದಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ

i) 'ಯುವಜನತೆಯಲ್ಲಿ ನೈತಿಕತೆಯ ಅಭಾವ'- ಈ ಬಗ್ಗೆ ಚರ್ಚಿಸುತ್ತಾ ಒಂದು ಪ್ರಬಂಧ ಬರೆಯಿರಿ.

ii) ಮೂಢನಂಬಿಕೆ ಒಂದು ಸಾಮಾಜಿಕ ಪಿಡುಗು' ಇದನ್ನು ವಿವರಿಸುತ್ತಾ ನಿಮ್ಮ ಅಭಿಪ್ರಾಯಗಳನ್ನು ವಿವರವಾಗಿ ಬರೆಯಿರಿ.

iii) ನೀವು ಭೇಟಿ ನೀಡಿದ ಒಂದು ಗಿರಿಧಾಮದ ಬಗ್ಗೆ ವರ್ಣಿಸುತ್ತಾ ಒಂದು ಪ್ರಬಂಧ ಬರೆಯಿರಿ.

iv) ಸ್ವಚ್ಛತೆಗೆ ಆದ್ಯತೆ ನೀಡದಿದ್ದರೆ ಮಾರಕ ರೋಗಗಳಿಗೆ ಎಡೆಮಾಡಿ ಕೊಟ್ಟಂತೆ-ಈ ಮಾತು ಅಕ್ಷರಶಃ ಸರಿ ಇದನ್ನು ಉದಾಹರಣೆಯೊಂದಿಗೆ ವಿವರಿಸಿ

---

v) ಕೆಳಗೆ ನೀಡಲಾಗಿರುವ ಯಾವುದಾದರೊಂದು ವಿಷಯದ ಬಗ್ಗೆ ಒಂದು ಮೂಲ ಕಥೆ ಬರೆಯಿರಿ.

a) 'ದುಡಿಮೆಯೇ ದುಡ್ಡಿನ ತಾಯಿ'- ಈ ಹೇಳಿಕೆಯನ್ನು ವಿವರಿಸುತ್ತಾ ಒಂದು ಕತೆ ಬರೆಯಿರಿ.

b) ....ಅದು ನನ್ನ ಜೀವನದಲ್ಲಿ ಮರೆಯಲಾಗದ ದಿನವಾಯಿತು! ಎಂದು ಮುಕ್ತಾಯ ವಾಗುವ ಕಥೆ ಬರೆಯಿರಿ.

**Question 2**

**Read the passage given below carefully and answer in Kannada the question that follow, using your own words.** **[15]**

ನಾಣ್ಯ ಸಂಗ್ರಹ ಉತ್ತಮ ಹವ್ಯಾಸ ಜೊತೆಗೆ ಮನೋರಂಜನೆಯನ್ನು ಒದಗಿಸುತ್ತದೆ. ಇದೊಂದು ಕುತೂಹಲಕಾರಿ ಹವ್ಯಾಸ. ಪ್ರಾಚೀನ ಕಾಲದಲ್ಲಿ ರೋಮ್ ದೇಶದ ಜನರು ಪ್ರಾಚೀನ ಗ್ರೀಸ್ ನಾಣ್ಯಗಳನ್ನು ಅವುಗಳ ಅಂದಚಂದಕ್ಕಾಗಿ, ಆಕರ್ಷಣೆಗಾಗಿ ಸಂಗ್ರಹಿಸುತ್ತಿದ್ದರು. ಹದಿಮೂರನೇ ಶತಮಾನದಲ್ಲಿ, ಯೂರೋಪ್ ದೇಶದಲ್ಲಿ ಪೋಪರು, ರಾಜ- ಮಹಾರಾಜರು, ಅನೇಕ ವಿದ್ವಾಂಸರು 'ನಾಣ್ಯಸಂಗ್ರಹ' ಹವ್ಯಾಸದಲ್ಲಿ ಆಸಕ್ತಿ ತಾಳಿದ್ದರು.

ಇದಕ್ಕೆ ಮುಖ್ಯ ಪ್ರೇರಣೆ ಎಂದರೆ ನಾಣ್ಯಗಳು ಕಲಾತ್ಮಕ ವಿನ್ಯಾಸ, ಐತಿಹಾಸಿಕ ವ್ಯಕ್ತಿಗಳ ಮೇಲಿನ ಪ್ರೀತಿ-ವಿಶ್ವಾಸ -ಶ್ರದ್ಧೆಯೇ ಕಾರಣ. ನಾಣ್ಯ ಸಂಗ್ರಹ ಹವ್ಯಾಸ ಕೆಲವೊಮ್ಮೆ ಲಾಭದಾಯಕವಾಗುತ್ತದೆ. ಹಳೇ ಕಾಲದ ನಾಣ್ಯಗಳನ್ನು ಆಸಕ್ತ ಜನರು ಅಧಿಕ ಬೆಲೆ ನೀಡಿ ಕೊಳ್ಳುವುದು ಉಂಟು.

ಬೇರೆ ಬೇರೆ ದೇಶಗಳ ಐತಿಹಾಸಿಕ, ಭೌಗೋಳಿಕ ವೃತ್ತಾಂತಗಳನ್ನು, ಆ ಕಾಲದ ಜನಜೀವನ, ಉಡುಪು, ಆಭರಣ, ಕೇಶಾಲಂಕಾರ ಇತ್ಯಾದಿ ಅತಿ ಸ್ವಾರಸ್ಯಕರ ವಿಷಯಗಳನ್ನು ತಿಳಿಯಲು ಈ ಹವ್ಯಾಸ ಸಹಾಯಕ. ನಾಣ್ಯಗಳ ಬಗ್ಗೆ ಹೆಚ್ಚು ಅಧ್ಯಯನ ಮಾಡುವುದಕ್ಕೆ 'ನಾಣ್ಯ ವಿಜ್ಞಾನ' ಎನ್ನುವುದುಂಟು.

ಲಂಡನ್, ಆಕ್ಸ್‌ಫರ್ಡ್, ಕೇಂಬ್ರಿಜ್, ಗ್ಲಾಸ್ಗೋ, ಪ್ಯಾರಿಸ್, ಬರ್ಲಿನ್, ನ್ಯಾಯಾರ್ಕ್ ಇತ್ಯಾದಿ ಸ್ಥಳಗಳಲ್ಲಿರುವ ವಸ್ತು ಸಂಗ್ರಹಾಲಯಗಳು ಅತ್ಯಂತ ಪ್ರಾಚೀನ ಹಾಗೂ ಅಪರೂಪದ ನಾಣ್ಯಗಳನ್ನು ಕಾಲಕಾಲಕ್ಕೆ ಸಂಗ್ರಹಿಸುತ್ತವೆ.

ನಾಣ್ಯಗಳು ಕೆಡದಂತೆ ಎಚ್ಚರ ವಹಿಸಬೇಕು. ವ್ಯವಸ್ಥಿತವಾಗಿ ಜೋಡಿಸಿಡಬೇಕು. ಕೆಲವು ಸಂಗ್ರಹಕಾರರು ಶೇಖರಿಸಿದ ನಾಣ್ಯಗಳನ್ನು ಎರಡು ಅಂಗುಲ ಉದ್ದದ ಚೌಕಾಕಾರದ ಲಕೋಟೆಯ ಹೊರಮೈಯಲ್ಲಿ ಒಳಗಿರುವ ನಾಣ್ಯಗಳ ವಿವರ ಬರೆಯುತ್ತಾರೆ. ಇದಕ್ಕಾಗಿ ಪಾರದರ್ಶಕ ಲಕೋಟೆ, ಉಪಯೋಗಿಸುವುದುಂಟು.

ಪ್ರಶ್ನೆಗಳು

i. ಹವ್ಯಾಸ ಎಂದರೇನು? ನಾಣ್ಯಗಳನ್ನು ಏಕೆ ಸಂಗ್ರಹಿಸುತ್ತಿದ್ದರು?

ii. ನಾಣ್ಯ ಸಂಗ್ರಹಕ್ಕೆ ಮುಖ್ಯ ಪ್ರೇರಣೆಗಳೇನು ?

iii. ಯಾವ ಯಾವ ದೇಶದ ವಸ್ತು ಸಂಗ್ರಹಾಲಯಗಳಲ್ಲಿ ಅಪರೂಪದ ನಾಣ್ಯಗಳನ್ನು ಸಂಗ್ರಹಿಸಲಾಗುತ್ತದೆ?

iv. ನಾಣ್ಯಸಂಗ್ರಹ ಹವ್ಯಾಸ ಯಾವುದಕ್ಕೆ ಸಹಾಯಕ ?

v. ನಾಣ್ಯಗಳನ್ನು ರಕ್ಷಿಸಿ ಇಡುವ ವಿಧಾನಗಳಾವುವು?

**Question 3**

**Answer the following as instructed:**

ಸೂಚನೆಗನುಗುಣವಾಗಿ ಬರೆಯಿರಿ:

**i) Use the following words in sentences of your own, to illustrate their meanings** [5]

ಕೊಟ್ಟಿರುವ ಪದಗಳನ್ನು ಸ್ವಂತವಾಕ್ಯಗಳಲ್ಲಿ ಪ್ರಯೋಗಿಸಿ:

a) ಅದ್ಭುತ b) ಸಂತೈಸು c) ಕಪಿಮುಷ್ಟಿ d) ಮೊರೆಯಿಡು e)ಪ್ರಚಾರ

**ii) Correct the following sentences and rewrite:** [5]

ಕೆಳಗಿನ ವಾಕ್ಯಗಳನ್ನು ಸರಿಪಡಿಸಿ ಬರೆಯಿರಿ:

a) ಭೀಕರ ಚಂಡಮಾರುತಕ್ಕೆ ಅನೇಕ ಮರಗಳನ್ನು ಧರೆಗುರುಳಿದವು.

b) ಮಹಾಮಾರಿ ಕೊರೊನಾಕ್ಕೆ ಹೆದರಿ ,ಜನರು ಪಟ್ಟಣಕ್ಕೆ ಹಳ್ಳಿಗಳಿಂದ ಹೋಗುತ್ತಿದ್ದಾರೆ.

c) ಗಿಳಿಯು ಹಣ್ಣುಗಳಿಂದ ತಿನ್ನುತ್ತಿತ್ತು.

d) ಸತ್ಯಕ್ಕೆ ಸುಖವಿಲ್ಲ ,ಸುಳ್ಳಿಗೆ ಸಾವಿಲ್ಲ. – ಎಂಬುದೊಂದು ಗಾದೆ.

e) ಕೃಷ್ಣದೇವರಾಯನು ,ತೆನಾಲಿ ರಾಮನಿಗೆ 'ಮುಖ ನಿನ್ನ ಇಲ್ಲಿಂದ ಕಾಲು ಕೀಳು ತೋರಿಸ ಬೇಡ' ಎಂದನು

## SECTION B

## PRESCRIBED TEXTBOOKS – 40 Marks

*Answer **four** questions from this Section on **at least three** of the prescribed textbooks.*

## ಕನ್ನಡ ಕಿರಣ (Kannada Kirana)

**Question 4**

**ಸಮಸ್ತ** ಹಿಂದೂಗಳಿಗೆ ತೀರ್ಥಕ್ಷೇತ್ರ ವಾದ ಕನ್ಯಾಕುಮಾರಿಗೆ ಆಗಮಿಸಿದ ತಕ್ಷಣ ಸ್ವಾಮೀಜಿ ನೇರವಾಗಿ ದೇವಿಯ ಆಲಯವನ್ನು ಪ್ರವೇಶಿಸಿದರು.

**ಪ್ರಶ್ನೆಗಳು**

i) ದೇವಿಯ ಮುಂದೆ ಪ್ರಣಾಮ ಮಾಡಿದಾಗ ಸ್ವಾಮೀಜಿಯ ಹೃದಯದಿಂದ ಹೊಮ್ಮಿದ ಪ್ರಾರ್ಥನೆ ಏನು? [1]

ii) "ಶ್ರೀಪಾದಶಿಲೆ" – ಎಂದು ಯಾವುದನ್ನು ಕರೆಯುತ್ತಾರೆ ? ಶಾಕ್ತರ ನಂಬಿಕೆ ಏನು? [2]

iii) ಸ್ವಾಮೀಜಿಯವರನ್ನು ದಡಕ್ಕೆ ಯಾರು ಹೇಗೆ ಕರೆ ತಂದರು? ಜನರ ಪ್ರಶ್ನೆಗೆ ಸ್ವಾಮೀಜಿಯ ಉತ್ತರವೇನು? [2]

iv) ಸ್ವಾಮಿ ವಿವೇಕಾನಂದರು ತಪಸ್ಸನ್ನಾಚರಿಸಿದ ಶಿಲೆ ಹೇಗೆ ಜಗತ್ಪ್ರಸಿದ್ಧವಾಗಿದೆ? ವಿವರಿಸಿ [5]

**Question 5**

ಶೀಲಿ ಸೋನ್ಯ ರಂಗೋಲಿ ಮಾರಲು ಹೊರಟ ಸನ್ನಿವೇಶವನ್ನು ವರ್ಣಿಸಿ. ಅವರು ಹೇಗೆ ತಮ್ಮ ಹೊಟ್ಟೆ ತುಂಬಿಸಿಕೊಂಡರು? [10]

**Question 6**

ಪಂಜಾಬಿಗೆ ವಲಸೆ ಹೋದ ಜನರು ಹಿಂತಿರುಗಿ ಬಂದಾಗ ಅಲ್ಲಾದ ಬದಲಾವಣೆ ಏನು?

ಜಂಭೋಜಿಯವರ ಸಂದೇಶವೇನಾಗಿತ್ತು? [10]

---

## ಕಾವ್ಯ ಸುಧೆ - ಪದ್ಯ

## (Kaavya Sudhe - Poetry)

**Question 7**

ತಲಿಮ್ಯಾಲ ಹೊರಿಯೊಂದ|ಬಗಲಾಗ ಕುಸೊಂದ

ಬಂದಾಳ ಬಾಲಿ ಬಂದಾಳ|ಹೊಲದಿಂದ ಬಂದಾಳ

i)ಕವಿ ಮಧುರ ಚೆನ್ನ ಅವರ ಪ್ರಕಾರ ಸುಖ ಜೀವನ ಎಂದರೇನು? [1]

ii) ಹೊಲಕ್ಕೆ ಹೋದ ಬಾಲೆ ಹೇಗೆ ಲಗುಬಗೆಯಿಂದ ಮನೆಯ ಕಡೆ ಹೆಜ್ಜೆ ಹಾಕುತ್ತಿದ್ದಳು [2]

iii) ಮನೆಗೆ ಬಂದ ಬಾಲೆ ಏನು ಮಾಡಿದಳು? [2]

iv) ಬಾಲೆಗೆ ಯಾರ ಕನಸಾಯಿತು ? ವಿವರಿಸಿ. [5]

**Question 8**

ಮನುಷ್ಯನು ಹೊಟ್ಟೆಪಾಡಿಗಾಗಿ ಯಾವ ಯಾವ ರೀತಿಯ ನಾಟಕವನ್ನಾಡುತ್ತಾನೆಂದು ಪುರಂದರದಾಸರು' ಉದರ ವೈರಾಗ್ಯ' ಕೀರ್ತನೆಯಲ್ಲಿ ತಿಳಿಸಿದ್ದಾರೆ? ವಿವರಿಸಿ [10]

**Question 9**

ಕವಿ ಸದಾನಂದ ಅವರು 'ಸರಿಯದಿರು ಇರುಳೇ' ಎಂದು ಇರುಳಿನ ಬಗ್ಗೆ ನೀಡಿರುವ ವಿವರಣೆಗಳೇನು? [10]

## ಪ್ರೇಮ ಭಿಕ್ಷು

## (Prema Bhikshu)

**Question 10**

ಅಂಗುಲಿಮಾಲ ಬಂಡೆಯಿಂದ ಧುಮುಕಿದ. ಅವನ ಹಿಂಬಾಲಕರೂ ತಕ್ಷಣ ಹಾಗೆಯೇ ಮಾಡಿದರು, ಅವನು ಹೇಳಿದ : ನಾನುಚಕ್ರವರ್ತಿ !

i) ಅಂಗುಲಿಮಾಲನ ಇಬ್ಬರು ಹಿಂಬಾಲಕರನ್ನು ಹೆಸರಿಸಿ [1]

ii) ಅಂಗುಲಿ ಮಾಲನ ಕೈಯ ಖಡ್ಗ ನೆಲಕ್ಕೆ ಜಾರಿ ಬಿದ್ದ ಬಗೆ ಹೇಗೆ? [2]

iii) ಬುದ್ಧ ಅಂಗುಲೀಮಾಲನ ಬೆನ್ನನ್ನು ಸವರಿದಾಗ ಅವನಿಗಾದ ಅನುಭವವೇನು?[2]

iv) ತನ್ನ ಮುಂದಿರುವವನು ಬುದ್ಧನೆಂದು ತಿಳಿದಾಗ, ಅಂಗುಲಿಮಾಲನು ಏನೆಂದು ಅರಿಕೆಮಾಡಿಕೊಂಡ? [5]

**Question 11**

ಬುದ್ಧನು ಹೇಳಿದ ಮಹಾಪಿಂಗಲನ ಕತೆಯನ್ನು ತಿಳಿಸಿ [10]

**Question 12**

ಬುದ್ಧನಿಗೆ ಹಿಮಾಲಯದಿಂದ ಬಂದ ಕರುಣೆಯ ಮೊದಲ ಸಂದೇಶದ ಪ್ರಸಂಗವನ್ನು ವಿವರಿಸಿ [10]

## ಹೆಬ್ಬೆರಳು (ನಾಟಕ )

## (Hebberalu – Drama)

**Question 13**

'ಎಲೆ ಮರುಳೆ, ಮೊದಲೆ ಆರ್ಯಂ, ಮೇಲೆ ಪಾರ್ವನಾತಂ, ನಮಗೆ ಕರಿಯ ಭಿಲ್ಲರನಾರ್ಯರಿಗೆ ವಿದ್ಯೆ ಹೇಳುವನೇ?

i) ಮೇಲಿನ ಮಾತಿನ ಅರ್ಥ ತಿಳಿಸಿ [1]

ii)ಏಕಲವ್ಯನನ್ನು ದ್ರೋಣರ ಬಳಿಗೆ ಹೋಗದಂತೆ ತಡೆಯಲು,ಹಿರಣ್ಯಧನು ಹೇಳಿದ ಬುದ್ಧಿಮಾತುಗಳೇನು? [2]

iii) ಗೊಂದಲದವರು ಹೇಳುವ ಎರಡು ವಿಧದ ನರರ ಬಗ್ಗೆ ತಿಳಿಸಿ [2]

iv) ಗೊಂದಲದವರು ಮತ್ತು ಹಿರಣ್ಯಧನು, ಏಕಲವ್ಯನನ್ನು ಹರಸಿ ಕಳಿಸಿದ್ದು ಹೇಗೆ? ವಿವರಿಸಿ. [5]

**Question 14**

ಗುರು ದ್ರೋಣರು ಏಕಲವ್ಯನಿಗೆ ವಿದ್ಯೆ ಹೇಳಿಕೊಡಲು ಸಾಧ್ಯವಿಲ್ಲವೆನ್ನಲು ನೀಡುವ ಕಾರಣಗಳೇನು? ವಿವರಿಸಿ. [10]

**Question 15**

ವಿದ್ಯೆ ಕಲಿತ ಏಕಲವ್ಯನು ಗುರುವಿಗೆ ಕಾಣಿಕೆ ಕೊಡುವೆನೆಂದಾಗ, ಹಿರಣ್ಯಧನುವಿನ ಮನಸ್ಸಿನಲ್ಲಾದ ಹೋರಾಟ, ಏಕಲವ್ಯನು ದ್ರೋಣರ ಬಳಿ ಹೋಗುವುದನ್ನು ತಪ್ಪಿಸಲು ಅವನು ನಡೆಸುವ ಪ್ರಯತ್ನಗಳ ಬಗ್ಗೆ ಬರೆಯಿರಿ. [10]

---